# ಮತ್ತೆ ಕಮಲ-ದಳ ದೋಸ್ತಿ

## ಎಂ.ಕೆ. ಪ್ರಾಣೇಶ್ ಉಪ ಸಭಾಪತಿ : 17 ಮತ ಅಂತರದ ಗೆಲುವು

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ವಿಧಾನಪರಿಷತ್ ನೂತನ ಉಪ ಸಭಾಪತಿಯಾಗಿ ಬಿಜೆಪಿಯ ಎಂ.ಕೆ.ಪ್ರಾಣೇಶ್ ಆಯ್ಕೆಯಾಗಿದ್ದು, ಸ್ಥಳೀಯ ಸಂಸ್ಥೆಗಳ ಕ್ಷೇತ್ರಗಳಿಂದ ಮೊದಲ ಬಾರಿಗೆ ಸದಸ್ಯರಾಗಿ ಮಹತ್ವದ ಹುದ್ದೆ ಪಡೆದ ಶ್ರೇಯಸ್ಸಿಗೆ ಪಾತ್ರರಾಗಿದ್ದಾರೆ. ಜೆಡಿಎಸ್ ನೆರವಿನೊಂದಿಗೆ 17 ಮತಗಳ ಅಂತರದಿಂದ ಪ್ರಾಣೇಶ್ ಗೆದ್ದು ಬೀಗಿದರು. ಇದರಿಂದಾಗಿ ಮೇಲ್ಮನೆಯಲ್ಲಿ ಕಮಲ ಹಾಗೂ ತೆನೆ ಹೊತ್ತ ಮಹಿಳೆ ಮಧ್ಯೆ ದೋಸ್ತಿ ಮತ್ತೆ ಕುದುರಿದೆ.

ಸಂಖ್ಯಾಬಲದಿಂದ ಆಡಳಿತಾರೂಢ ಬಿಜೆಪಿ ದೊಡ್ಡ ಪಕ್ಷವಾಗಿದ್ದರೂ ಸಭಾಪತಿ ಸ್ಥಾನವನ್ನು ಜೆಡಿಎಸ್‌ಗೆ ಬಿಟ್ಟುಕೊಡುವುದು ನಿಶ್ಚಿತ, ಸದನದ ಹಿರಿಯ ಸದಸ್ಯ ಬಸವರಾಜ ಹೊರಟ್ಟಿಗೆ ಆ ಹುದ್ದೆ ಒಲಿದು ಬರುವುದು ಬಹುತೇಕ ಖಚಿತವಾಗಿದೆ. ಬಿಜೆಪಿ




ವರಿಷ್ಠರು, ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅಪೇಕ್ಷೆಯಂತೆ ದಳ ನಾಯಕರ ಜತೆಗೆ ಮೈತ್ರಿಯಾಗಿರುವ ಕಾರಣ ಮಹತ್ವದ ವಿಧೇಯಕಗಳ ಅಂಗೀಕಾರ ಸಲೀಸಲಾಗಿದ್ದು, ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ರಾಜಕೀಯ ತಂತ್ರಗಾರಿಕೆ ಗಮನಸೆಳೆದಿದೆ.

**ಚುನಾವಣೆ ಮೂಲಕ ಬಯಕೆ ಈಡೇರಿಕೆ:** ಉಪ ಸಭಾಪತಿ ಚುನಾವಣೆಗಾಗಿ ಆಡಳಿತ ಪಕ್ಷದಿಂದ ಎಂ.ಕೆ.ಪ್ರಾಣೇಶ್ ಹಾಗೂ ಕಾಂಗ್ರೆಸ್‌ನಿಂದ ಕೆ.ಸಿ.ಕೊಂಡಯ್ಯ ಅಭ್ಯರ್ಥಿಯಾದರು. ಪ್ರಾಣೇಶ್ ಪರವಾಗಿ ಶಶೀಲ್ ಜಿ.ನಮೋಶಿ, ಮಹಾಂತೇಶ ಕವಟಗಿ ಪ್ರತ್ಯೇಕವಾಗಿ ಸೂಚಿಸಿದ ಪ್ರಸ್ತಾವನೆಗೆ ರಘುನಾಥರಾವ್ ಮಲ್ಕಾಪುರೆ, ಡಾ.ತೇಜಸ್ವಿನಿಗೌಡ ಅನುಮೋದನೆ ನೀಡಿದರು. ಕಾಂಗ್ರೆಸ್‌ನ ಕೆ.ಸಿ.ಕೊಂಡಯ್ಯ ಪರವಾಗಿ ಎಸ್.ಆರ್.ಪಾಟೀಲ್, ಅಲ್ಲಂ ವೀರಭದ್ರಪ್ಪ ಪ್ರತ್ಯೇಕವಾಗಿ ಸೂಚಿಸಿದ ಪ್ರಸ್ತಾವನೆಯನ್ನು ಎಂ.ನಾರಾಯಣಸ್ವಾಮಿ ಹಾಗೂ ಬಿ.ಕೆ.ಹರಿಪ್ರಸಾದ್ ಅನುಮೋದಿಸಿದರು.

ಜೆಡಿಎಸ್‌ನ ಜಾತ್ಯತೀತ ನೈಜ ನಿಲುವು ಹೊರಗೆಡಹಬೇಕೆಂಬ ಕಾರ್ಯತಂತ್ರದ ಭಾಗವಾಗಿ ಮತ ವಿಭಜನೆ ಮೂಲಕ ಚುನಾವಣೆ ನಡೆಸಬೇಕು ಎಂದು ಪ್ರತಿಪಕ್ಷ ಕಾಂಗ್ರೆಸ್ ಬೇಡಿಕೆಯಿಟ್ಟಿತು. ಅದರಂತೆಯೇ ಮತ ವಿಭಜನೆ ಬಳಿಕ ಎಂ.ಕೆ.ಪ್ರಾಣೇಶ್ 41 ಮತಗಳು ಹಾಗೂ ಕೆ.ಸಿ.ಕೊಂಡಯ್ಯ 24 ಮತಗಳನ್ನು ಗಳಿಸಿದ್ದು, ನೂತನ ಉಪ ಸಭಾಪತಿಯಾಗಿ ಪ್ರಾಣೇಶ್ ಆಯ್ಕೆಯಾಗಿದ್ದಾರೆ ಎಂದು ಸಭಾಪತಿ ಕೆ.ಪ್ರತಾಪಚಂದ್ರಶೆಟ್ಟಿ ಪ್ರಕಟಿಸುತ್ತಿದ್ದಂತೆಯೇ ಆಡಳಿತ ಪಕ್ಷದ ಸದಸ್ಯರು ಮೇಜು ಕುಟ್ಟಿ ಹರ್ಷ ವ್ಯಕ್ತಪಡಿಸಿದರು.

ಈ ವೇಳೆ ಬಿಜೆಪಿ ಎಲ್ಲ 31 ಸದಸ್ಯರು ಹಾಜರಿದ್ದರು. ಜೆಡಿಎಸ್‌ನಿಂದ 10 ಸದಸ್ಯರು ಹಾಜರಿ, ಉಳಿದ ಮೂವರು ಗೈರು ಹಾಜರಾಗಿದ್ದರು. ಉಪ ಸಭಾಪತಿಯಾಗಿದ್ದ ಎಸ್.ಎಲ್.ಧರ್ಮೇಗೌಡರ ಅಕಾಲಿಕ ನಿಧನದಿಂದ ತೆರವಾಗಿದ್ದ ಈ ಸ್ಥಾನಕ್ಕೆ ಚುನಾವಣೆ ನಡೆಯಿತು.

ಆಯ್ಕೆ ಪ್ರಕ್ರಿಯೆ ಮುಗಿದ ಬಳಿಕ ಆಡಳಿತ ಪಕ್ಷದ ಸಾಲಿನಲ್ಲಿದ್ದ ಎಂ.ಕೆ.ಪ್ರಾಣೇಶ್ ಅವರನ್ನು ಉಪ ಸಭಾಪತಿ ಆಸನದತ್ತ ಸಭಾನಾಯಕ ಕೋಟ ಶ್ರೀನಿವಾಸ ಪೂಜಾರಿ, ಸಚಿವರು ಕರೆದೊಯ್ದರೆ, ಪ್ರತಿಪಕ್ಷ ನಾಯಕ ಎಸ್.ಆರ್.ಪಾಟೀಲ್, ಇನ್ನಿತರ ಸದಸ್ಯರು ಬರ ಮಾಡಿಕೊಂಡರು. ಉಪ ಸಭಾಪತಿ ಆಸನ ಅಲಂಕರಿಸಿದ ಪ್ರಾಣೇಶ್ ಬಳಿಗೆ ಧಾವಿಸಿದ ಎಲ್ಲ ಸದಸ್ಯರು ಪಕ್ಷಭೇದ ಮರೆತು ಅಭಿನಂದನೆ ಸಲ್ಲಿಸಿ ಶುಭ ಹಾರೈಸಿದರು.



### ಪ್ರಾಣೇಶ್ ಪರಿಚಯ

ಬಿ.ಎ. ಪದವೀಧರರಾದ ಎಂ.ಕೆ.ಪ್ರಾಣೇಶ್ ಅವರು ಎಂ.ಯು. ಕಾಳೇಗೌಡ ಹಾಗೂ ರತ್ನಮ್ಮ ದಂಪತಿ ಪುತ್ರ. ಮೂಡಿಗೆರೆ ತಾಲೂಕಿನ ಘಟ್ಟದಹಳ್ಳಿಯ ಪ್ರಾಣೇಶ್ 1989ರಿಂದ ಬಿಜೆಪಿಯಲ್ಲಿ ಗುರುತಿಸಿಕೊಂಡಿದ್ದಾರೆ. 1991ರಿಂದ 1998ರವರೆಗೆ ಮೂಡಿಗೆರೆ ತಾಲೂಕು ಬಿಜೆಪಿ ಯುವ ಮೋರ್ಚಾ ಅಧ್ಯಕ್ಷರಾಗಿ, 1998ರಿಂದ 2001ರವರೆಗೆ ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷರಾಗಿ, 2000ರಿಂದ 2005ರವರೆಗೆ ಜಿಪಂ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. 2004ರಿಂದ 2007ರವರೆಗೆ ಬಿಜೆಪಿ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯರಾಗಿ, 2001-2004 ಮತ್ತು 2007-2011ರವರೆಗೆ ಎರಡು ಅವಧಿಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷರಾಗಿದ್ದರು. 2010ರಿಂದ 2013ರವರೆಗೆ ಜಂಗಲ್ ಲಾಡ್ಜ್ ಮತ್ತು ರೆಸಾರ್ಟ್ ನಿಗಮದ ಅಧ್ಯಕ್ಷರಾಗಿದ್ದರು. 2016ರಿಂದ ವಿಧಾನಪರಿಷತ್ ಸದಸ್ಯರಾಗಿದ್ದಾರೆ.

ಆರ್‌ಎಸ್‌ಎಸ್ ಮಾರ್ಗದರ್ಶನ, ಬಿಜೆಪಿಗೆ ನಿಷ್ಠೆಯಿಂದ ಸಲ್ಲಿಸಿದ ಸೇವೆಗೆ ಬಯಸದೆ ಬಂದ ಭಾಗ್ಯವಿದು. ಜವಾಬ್ದಾರಿಯನ್ನು ನಿಷ್ಪಕ್ಷಪಾತವಾಗಿ ನಿರ್ವಹಿಸಿ ಎಲ್ಲರ ಸಹಕಾರ, ನಂಬಿಕೆಗೆ ತಕ್ಕಂತೆ ನಡೆದುಕೊಳ್ಳುವೆ. ಆಡಳಿತ-ಪ್ರತಿಪಕ್ಷಗಳ ಮಧ್ಯೆ ಕಾವೇರಿದ ಚರ್ಚೆ ಸಹಜವಾದರೂ ಜನಪರ ಕಾಳಜಿ ಮುಖ್ಯ.

| ಎಂ.ಕೆ.ಪ್ರಾಣೇಶ್ ಉಪ ಸಭಾಪತಿ





ಸರ್ಕಾರದ ನೀತಿ-ನಿರ್ಧಾರಗಳ ಪರಾಮರ್ಶೆ, ಮನಸಾಕ್ಷಿಗೆ ಅನುಗುಣವಾಗಿ ಕಾರ್ಯನಿರ್ವಹಿಸಲು ಮೇಲ್ಮನೆ ವ್ಯವಸ್ಥೆಯಿದೆ. ಸಂವಿಧಾನ, ನಿಯಮಗಳ ಪಾಲನೆ ವಿಷಯದಲ್ಲಿ ಸಭಾಪತಿ ಹಾಗೂ ಉಪ ಸಭಾಪತಿ ಸಂಬಂಧ ಉತ್ತಮವಾಗಿರಬೇಕು. ಸದನದ ಹಿರಿಮೆ ಉಳಿಸಿಕೊಂಡು ಮುನ್ನಡೆಯಬೇಕು.

| ಬಸವರಾಜ ಬೊಮ್ಮಾಯಿ ಗೃಹ ಸಚಿವ

ಕಹಿ ಘಟನೆ ಮರೆಯುವುದು ಒಳಿತು. ಪರಿಪೂರ್ಣ ಚರ್ಚೆ, ತರಾತುರಿ ನಿರ್ಧಾರಗಳ ವಿಮರ್ಶೆಗೆ ವೇದಿಕೆಯಾದ ವಿಧಾನಪರಿಷತ್‌ಗೆ 113 ವರ್ಷಗಳ ಇತಿಹಾಸವಿದೆ. ವ್ಯಕ್ತಿತ್ವದಿಂದ ಕುರ್ಚಿಗೆ ಗೌರವ ಬರಬೇಕು, ಪಾವಿತ್ರ್ಯತೆ ರಕ್ಷಣೆಯಾಗಬೇಕು. ಉಪ ಸಭಾಪತಿ ಸ್ಥಾನಕ್ಕೆ ಅನುಗುಣವಾಗಿ ವಿಚಾರಧಾರೆ ಬದಲಿಸಿಕೊಳ್ಳಬೇಕು.

| ಎಸ್.ಆರ್.ಪಾಟೀಲ್ ಪ್ರತಿಪಕ್ಷ ನಾಯಕ

### ನಗೆಬುಗ್ಗೆ ಹರಿಸಿದ ಕೊಂಡಯ್ಯ

ಪ್ರಾಣೇಶ್ ಪರವಾಗಿ ಬಲ ಭಾಗದ ಸದಸ್ಯರ ಎಣಿಕೆ ಮುಗಿದು, ಎಡಭಾಗದ ಸದಸ್ಯರನ್ನು ಎದ್ದುನಿಲ್ಲಲು ಸಭಾಪತಿ ಸೂಚಿಸಿದರು.



ಆ ವೇಳೆ ಯಾವುದೋ ಮೂಡ್‌ನಲ್ಲಿದ್ದ ಕಾಂಗ್ರೆಸ್ ಅಭ್ಯರ್ಥಿ ಕೆ.ಸಿ.ಕೊಂಡಯ್ಯ ಎದ್ದು ನಿಂತಾಗ ಪಕ್ಕದಲ್ಲಿದ್ದ ಎಸ್.ಆರ್.ಪಾಟೀಲ್ ಕೈಹಿಡಿದು ಕೂರಿಸಿದರು. ಆ ವೇಳೆ ಸದನದಲ್ಲಿ ನಗೆಬುಗ್ಗೆ ಹರಿದರೆ, ಹಿರಿಯ ಕೊಂಡಯ್ಯನವರೇ ನಮ್ಮ ಪರವಾಗಿದ್ದಾರೆ ಎಂದು ಆಡಳಿತ ಪಕ್ಷದ ಸದಸ್ಯರು ಹರ್ಷ ವ್ಯಕ್ತಪಡಿಸಿದರು. ಇದು, ನನ್ನ ದೊಡ್ಡತನವೆಂದು ತಿಳಿಯಬೇಕು ಎಂದು ಕೊಂಡಯ್ಯ ಉತ್ತರಿಸಿ ಮುಗುಳ್ನಕ್ಕರು.